ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಲು ಹೊರಟ್ಟಿದ್ದೇನೆ ಅಂದರೆ ಇಲ್ಲೇ ಸದನದಲ್ಲಿ ನಡೆದಿರುವಂಥಾದ್ದು, ನಮ್ಮ ವಿಶ್ವೇಶ್ವರಹೆಗಡೆಯವರು.....

ಅಧ್ಯಕ್ಷರು : ನನ್ನ ಅಪೀಲು ಏನೇಂದರೆ ಥಿಂಕ್ ಮಾಡಿ. ನಾವು ಇದನ್ನು ಸಪರೇಟ್ ಆಗಿ ಚರ್ಚೆಗೆ ತೆಗೆದುಕೊಂಡು can we have a longer discussion with all the affected members who also involved in it. If you can agree now for this, we will just drop this matter here. we can have elaborate discussion. ನಾನು ಸನ್ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಮತ್ತು ಇತರೇ ಸನ್ಮಾನ್ಯ ಸದಸ್ಯರಲ್ಲಿ ಏನು ವಿನಂತಿ ಮಾಡಿಕೊಳ್ಳುತೇನೆ ಅಂದರೆ ವಿಷಯದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವದೃಷ್ಟಿಯಿಂದ ಯಾವ ಸನ್ಮಾನ್ಯ ಸದಸ್ಯರುಗಳು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ತೊಂದರೆ ಆಗಿದೆ ತಮ್ಮ ಕರ್ತವ್ಯನಿರ್ವಹಣೆ ಮಾಡತಕ್ಕಂಥ ಸಂದರ್ಭದಲ್ಲಿ ತಮ್ಮ ಮನಸ್ಸಿಗೆ ನೋವಾಗಿದೆ ಅಗೌರವವಾಗಿದೆ ಎನ್ನತಕ್ಕಂಥ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ ಈ ವಿಚಾರವನ್ನು ಈ ಸದನದಲ್ಲಿ ಸವಿಸ್ತಾರವಾಗಿ ಚರ್ಚೆ ಮಾಡುವ ದೃಷ್ಟಿಯಿಂದ ನಾವು ಮಧ್ಯಾಹ್ನ ಸದನದ ಕಾರ್ಯಕಲಾಪಗಳ ಸಮಿತಿ ಸೇರಿದಾಗ ಎಷ್ಟು ಹೊತ್ತಿಗೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹೇಳಿ ಆಡಳಿತ ಪಕ್ಷದವರನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಸಮಯ ನಿಗಧಿ ಮಾಡೋಣ. ದಯಾಮಾಡಿ ತಾವುಗಳು ಸಹಕರಿಸಿದರೆ ಒಳ್ಳೆಯದು. ಈಗ 1-30 ಗಂಟೆಯವರೆಗೂ ಒಂದು ಗಮನಸೆಳೆಯುವ ಸೂಚನೆಯನ್ನು ತೆಗೆದು ಕೊಳ್ಳೋಣ.

ಗಮನ ಸೆಳೆಯುವ ಸೂಚನೆಗಳು :

ಕುಷ್ಟಗಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವಿಷಯದಲ್ಲಿ ತೋರಿತ್ತಿರುವ ತಾರತಮ್ಯ.

ಶ್ರೀ ಕೆ. ಶರಣಪ್ಪ (ಕುಷ್ಟಗಿ) : ಅಧ್ಯಕ್ಷರೇ, ಕುಷ್ಟಗಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವಿಷಯದಲ್ಲಿ ತೋರುತ್ತಿರುವ ತಾರತಮ್ಯದ ಬಗ್ಗೆ ಸನ್ಮಾನ್ಯ ಉಪಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಹೇಳುವುದಾದರೆ, ಸಿಂಧನೂರಿನಲ್ಲಿರುವ 110.33ಕೆ.ವಿ ವಿದ್ಯುತ್ ಉಪ ಕೇಂದ್ರದಿಂದ ಕುಷ್ಟಗಿ, ಮಸ್ಕಿ ಮತ್ತು ಸಿರಗುಪ್ಪಗಳಲ್ಲಿರುವ 33.11 ಕೆ ವಿ ವಿದ್ಯುತ್ ಉಪ ಕೇಂದ್ರಗಳಿಗೆ ವಿದ್ಯುತ್ ಸರಬರಾಜು ಆಗುತ್ತಿದೆ. ಸಿಂಧೂನೂರಿನ 110.33 ಕೆ ವಿ ವಿದ್ಯುತ್ ಉಪ ಕೇಂದ್ರಕ್ಕೆ ರಾಯಚೂರಿನಲ್ಲಿರುವ 220.110 ಕೆ ವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ. 11-8-95ರಂದು ರಾಯಚೂರಿನ 210 ಕೆ ವಿ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಒಂದು ಸರ್ಕ್ಯೂಟ್ ಬ್ರೇಕರ್ ದೋಷದಿಂದ, ಸಿಂಧನೂರು ವಿದ್ಯುತ್ ಉಪ ಕೇಂದ್ರದ ಲೋಡನ್ನು ನಿಯಂತ್ರಿಸುವುದು ಅನಿವಾರ್ಯವಾಯಿತು.

11-8-95ರ ಸಂಜೆ 6.50 ರಿಂದ 14-8-95ರ ಸಂಜೆ 7.00 ಗಂಟೆಯವರೆಗೆ ಈ ಕಾರಣದಿಂದ ಲೋಡನ್ನು ನಿಯಂತ್ರಿಸಲಾಗಿತ್ತು. ಈ ಅವಧಿಯಲ್ಲಿ ಸಿಂಧನೂರು ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಪಡೆಯುವ ಕುಷ್ಟಗಿ, ಸಿರಗುಪ್ಪ ಮತ್ತು ಮಸ್ಕಿ ವಿದ್ಯುತ್ ಬೇಡಿಕೆಯನ್ನು ಕೇಂದ್ರಗಳಿಗೆ ತಾರತಮ್ಯವಿಲ್ಲದೇ ಲೋಡನ್ನು ನಿಯಂತ್ರಿಸಿಲಾಗಿದೆ. ಅಲ್ಲದೆ, ರಾಜ್ಯದಲ್ಲಿ ಮುಂಗಾರಿನ ಅಭಾವದಿಂದ ವಿದ್ಯುತ್ ಉತ್ಪಾದನೆಯು

ಕುಂಟಿತವಾಗಿರುವುದರಿಂದ ಬೆಳಗಿನ ಮತ್ತು ಸಂಜೆಯ ಪೀಕ್ ಲೋಡ್‌ಗಳಲ್ಲಿ ವಿದ್ಯುತ್ ಬೇಡಿಕೆಯನ್ನು ನಿಯಂತ್ರಿಸುವುದು ಅಗತ್ಯವಾಗಿದ್ದು, ನಿಯಮಿತ ಮತ್ತು ಅನಿಯಮಿತ ಲೋಡ್ ಶೆಡ್ಡಿಂಗ್‌ಅನ್ನು ನಿರ್ವಹಿಸಲಾಗುತ್ತಿದೆ. ಈ ಸಮಯದಲ್ಲೂ ಸಹ ಕುಷ್ಟಗಿ ತಾಲ್ಲೂಕಿಗೆ ತಾರತಮ್ಯ ಮಾಡದೇ, ಕುಷ್ಟಗಿ, ಸಿರಗುಪ್ಪ ಮತ್ತು ಮಸ್ಕಿ ಈ ಮೂರು ತಾಲ್ಲೂಕುಗಳಿಗೂ ಸಮವಾಗಿ ಲೋಡ್ ಶೆಡ್ಡಿಂಗ್ ಅನ್ನು ಮಾಡಲಾಗುತ್ತಿದೆ. 9-8-1995ರಿಂದ 15-8-95ರವರೆಗೆ ಸಿರಗುಪ್ಪ ಮತ್ತು ಮಸ್ಕಿ ತಾಲ್ಲೂಕುಗಳಲ್ಲಿ ಉಂಟಾದ ವಿದ್ಯುತ್ ಅಡಚಣೆಯ ಒಟ್ಟು ಅವಧಿ ಅನುಕ್ರಮವಾಗಿ 32 ಮತ್ತು 37 ಗಂಟೆಗಳಾದರೆ ಕುಷ್ಟಗಿ ತಾಲ್ಲೂಕಿಗೆ ಉಂಟಾದ ವಿದ್ಯುತ್ ಅಡಚಣೆ ಕೇವಲ 27 ಗಂಟೆ, 30 ನಿಮಿಷ ಮಾತ್ರ. ಈ ಅಂಕಿ ಅಂಶಗಳಿಂದ. ಕುಷ್ಟಗಿ ತಾಲ್ಲೂಕಿಗೆ ವಿದ್ಯುತ್ ಸರಬರಾಜಿನ ವಿಷಯದಲ್ಲಿ ಯಾವ ರೀತಿಯಲ್ಲೂ ಅನ್ಯಾಯ ಉಂಟಾಗಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಕೆ. ಶರಣಪ್ಪ : ಈ ಅಂಕಿಅಂಶಗಳು ತಪ್ಪು ಮಾಹಿತಿಯಿಂದ ಕೂಡಿವೆ ಎಂದು ಅಧ್ಯಕ್ಷರ ಮೂಲಕ ತಿಳಿಸಬಯಸುತ್ತೇನೆ. ಅಲ್ಲದೆ, ಹಿಂದಿನ 5 ವರ್ಷಗಳಿಂದ ಕುಷ್ಟಗಿಗೆ ತಾರತಮ್ಯ ಮಾಡಿರುವ ಅನೇಕ ಆಧಾರಗಳು ಕಂಡುಬಂದಿವೆ, ಆದ್ದರಿಂದ ನಾನು ದಯವಿಟ್ಟು ಕೇಳಿಕೊಳ್ಳುವುದಿಷ್ಟೇ : ಸಂಬಂಧಪಟ್ಟ ಅಧಿಕಾರಿಗಳಿಗೆ ಕುಷ್ಟಗಿಗೆ ತಾರತಮ್ಯವಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಲು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್ : ನಮ್ಮ ಶಾಸಕರೇ ಇರುವ ಕಡೆ ನಾವೆಲ್ಲಾದರೂ ತಾರತಮ್ಯ ಮಾಡುತ್ತೇವೆಯೇ? ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು : ಈಗ ಸದನವನ್ನು ಒಂದು ಘಂಟೆಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ ಕಾಲ ವಿರಾಮಕ್ಕಾಗಿ 1 ಗಂಟೆ 20 ನಿಮಿಷದಲ್ಲಿ ಮುಂದೂಡಲ್ಪಟ್ಟಿತು.)

(ಸಭೆಯು 2.40 ಗಂಟೆಗೆ ಸಮಾವೇಶಗೊಂಡಿತು ಉಪಾಧ್ಯಕ್ಷರು ಶ್ರೀ ಎಂ.ಎಸ್. ಪಾಟೀಲ್ ಪೀಠವನ್ನು ಅಲಂಕರಿಸಿದ್ದರು)

ಗಮನ ಸೆಳೆಯುವ ಸೂಚನೆ

ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾದ ಪ್ರದೇಶದ ಜನರಿಗೆ ಪುನರ್ವಸತಿ ಕಲ್ಪಿಸದಿರುವ ಹಾಗೂ ಪರಿಹಾರಧನ ನೀಡದಿರುವುದು.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾದ ಪ್ರದೇಶದ ಜನರಿಗೆ ಪುನರ್ವಸತಿ ಕಲ್ಪಿಸದಿರುವ ಹಾಗೂ ಪರಿಹಾರ ಧನವನ್ನು ನೀಡದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಹೆಚ್.ಡಿ. ದೇವೆಗೌಡ (ಮುಖ್ಯ ಮಂತ್ರಿಯವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಜೆ.ಟಿ. ಪಾಟೀಲ್, ಬಿ.ಎಸ್. ಪಾಟೀಲ್, ಆರ್. ಎಂ. ಕಲೂತಿ, ಹಾಗೂ ಎಸ್.ಆರ್. ಕಾಶಪ್ಪನವರುಗಳು ತಂದಿರತಕ್ಕಂಥ ಗಮನ ಸೆಳೆಯುವ ಸೂಚನೆಗೆ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಬಿಜಾಪುರ ಜಿಲ್ಲೆ, ಆಲಮಟ್ಟಿ ಜಲಾಶಯದಲ್ಲಿ 1995-96ನೇ ಸಾಲಿನಲ್ಲಿ 21 ಹಳ್ಳಿಗಳು ಮುಳುಗಡೆಯಾಗಲಿವೆಯೆಂದು ಅಂದಾಜು ಮಾಡಲಾಗಿದೆ ಮತ್ತು ಅವುಗಳನ್ನು 14 ಪುನರ್ವಸತಿ ಕೇಂದ್ರಗಳಲ್ಲಿ ನೆಲೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ವರ್ಷದ ಪ್ರವಾಹದ ಸಮಯದಲ್ಲಿ ಮುಳುಗಡೆಯಾಗಲಿರುವ ಹಳ್ಳಿಗಳ ನಿವಾಸಿಗಳನ್ನು ಸ್ಥಳಾಂತರಿಸಲು